








'ಡೆತ್ ವ್ಯಾಲಿ' (ಸಾವಿನ ಕಣಿವೆ) ಅನ್ನೋ ಅಮೆರಿಕದ ಪ್ರಸಿದ್ಧ ಜಾಗದ ಬಗ್ಗೆ ಕೇಳಿದ್ದೆ. ಆಗಸ್ಟ್ ತಿಂಗಳ ಬೇಸಿಗೆಯ ಬಿಸಿಲಲ್ಲಿ ಇದರ ನಿಜವಾದ ದರ್ಶನವಾಗುತ್ತದೆ. ಸ್ಯಾನ್ ಫ್ರಾನ್ಸಿಸ್ಕೋ ಕಡೆಯಿಂದ ಯೋಸಮೈಟಿ ಪಾರ್ಕಿನ ಮೂಲಕ ಈ ವಿಶಾಲವಾದ ಸಂರಕ್ಷಿತ ಕಣಿವೆಗೆ ಹೋದೆವು.

ದಾರಿಯಲ್ಲಿ ಆಗೀಗ ಹಾದು ಹೋಗುವ ವಾಹನಗಳನ್ನು ಬಿಟ್ಟರೆ ಯಾರೂ ಇರಲಿಲ್ಲ. ಇಂಧನ, ನೀರು ಮತ್ತು ಆಹಾರದ ವ್ಯವಸ್ಥೆ ಮಾಡಿಕೊಂಡೇ ಹೊರಟಿದ್ದೆವು. ದಾರಿ ಮಧ್ಯ ಒಂದೇ ಒಂದು ಅಂಗಡಿ ಕಾಣ ಸಿಗುವುದಿಲ್ಲ.

'ಡೆತ್ ವ್ಯಾಲಿ' ಅಮೆರಿಕಾದ ಕ್ಯಾಲಿಫೋರ್ನಿಯ ಮತ್ತು ನೆವಾಡ ರಾಜ್ಯದ ಪೂರ್ವಕ್ಕಿರುವ ಅತಿರೇಖದ ಭೂವಲಯ. 1.3 ದಶಲಕ್ಷ (5,300 ಚದರ ಕಿ.ಮೀ.) ಎಕರೆಗಳಷ್ಟು ದೊಡ್ಡದಾದ ಈ ಬಂಜರು ಭೂಮಿಯಲ್ಲಿ ಕುರುಚಲು ಗಿಡಗಳ ಹೊರತಾಗಿ ಏನೂ ಬೆಳೆಯುವುದಿಲ್ಲ. ಶೇಕಡಾ 95ರಷ್ಟು ಜಾಗದಲ್ಲಿ ಯಾರೂ ಬದುಕಿಲ್ಲ. ಸಮುದ್ರ ಮಟ್ಟಕ್ಕಿಂತ ನೂರಾರು ಅಡಿ ಕೆಳಗಿರುವ ರಣಬಿಸಿಲಿನ, ಬಿರಿದ ಭೂಮಿಯ ರುದ್ರರಮಣೀಯ ಜನನಿಬಿಡ ಪ್ರದೇಶವಿದು.

ಸಮುದ್ರ, ಹಸಿರು, ತಿಳಿಗೊಳ, ತಣ್ಣನೆಯ ಗಾಳಿ ಈ ಯಾವುದೇ ರೀತಿಯ ಹಿತವಾದ ಸೌಂದರ್ಯ ಈ ಭೂಭಾಗಕ್ಕಿಲ್ಲ. ಆದರೆ ನೂರಾರು ಮಂದಿ ಪುಸ್ತಕ ಬರೆಯುವವರು, ಸಿನಿಮಾದವರು, ಟೀವಿಯವರು ಇಲ್ಲಿಯ ಸಾಲು ಬೆಟ್ಟಗಳನ್ನು, ವಿಶಾಲ ಬಂಜರು ಭೂಮಿಯನ್ನು ಮತ್ತು ಮರಳಿನ ದಿಣ್ಣೆಗಳನ್ನು ಕಳೆದ ಐವತ್ತು ವರ್ಷಗಳಿಂದಲೂ ಸೆರೆಹಿಡಿಯುತ್ತಾ ಬಂದಿದ್ದಾರೆ. 'ಸ್ಟಾರ್ ವಾರ್ಸ್' ಸಿನಿಮಾದಲ್ಲಿ ಈ ಪ್ರದೇಶವನ್ನು ಮತ್ತೊಂದು ಗ್ರಹವೆಂದೇ (ಟಾಟೋನಿಸ್ ಗ್ರಹ) ತೋರಿಸಿದ್ದಾರೆ. ಇಲ್ಲಿ ಒಮ್ಮೆ ಒಳಹೊಕ್ಕರೆ ಬೇರೆ ಗ್ರಹಕ್ಕೆ ಬಂದಂತೆಯೇ ಅನಿಸುತ್ತದೆ.

ಕಳೆದ ವರ್ಷ ಇಲ್ಲಿಗೆ ಭೇಟಿ ನೀಡಿದ ಪ್ರವಾಸಿಗರು 1.1 ದಶಲಕ್ಷಕ್ಕೂ ಹೆಚ್ಚು ಜನ!

ಇಲ್ಲಿನ ಬ್ಯಾಡ್ ವಾಟರ್ ಬೇಸಿನ್ ಸಮುದ್ರಮಟ್ಟಕ್ಕಿಂತ 279 ಅಡಿ ಕೆಳಗಿದ್ದು ಪ್ರಪಂಚದಲ್ಲಿಯೇ ಎರಡನೇ ತಗ್ಗಿನ ಪ್ರದೇಶವಾಗಿದೆ. (ಮೊದಲನೆಯದು ಅರ್ಜೆಂಟಿನಾದ ಲಗುನ ಡಿ ಕಾರ್ಬನ್). 1934 ರಲ್ಲಿ ಒಣಹವೆಯ ಅತಿಹೆಚ್ಚಿನ (ಆಂಬಿಯೆಂಟ್ ಏರ್) ದಾಖಲಾದ ಉಷ್ಣಾಂಶ 56.9 ಡಿಗ್ರಿಗಳಷ್ಟು. ಇಲ್ಲಿನ ಬೇಸಿಗೆಯಲ್ಲಿ ನಮಗೆ ಎದುರಾದದ್ದು ದಿನನಿತ್ಯದ 49– 50 ಡಿಗ್ರಿ ಉಷ್ಣಾಂಶ! ಒಣ ಹವೆಯ, ಗಾಳಿಯಲ್ಲಿ ತೇವಾಂಶದ ಲವಲೇಶವೂ ಇಲ್ಲದ ಈ ವಾತಾವರಣ ನಿಜವಾದ ಉರಿಬಿಸಿಲು, ರಾತ್ರಿ 7 ಗಂಟೆಯಲ್ಲೂ ನಿಗಿನಿಗಿ ಸೂರ್ಯನ ಶಾಖಕ್ಕೆ ವಾತಾವರಣವೇ ಅದುರುವ ಅನುಭವ!

1994ರಲ್ಲಿ ಅಮೆರಿಕಾ ಇದನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಿತು. ಹಾಲಿವುಡ್ಡಿನ ಕೌಬಾಯ್ ಚಿತ್ರಗಳ ಎಲ್ಲ ದೃಶ್ಯಗಳು ಇಲ್ಲಿ ತೆರೆದುಕೊಳ್ಳುತ್ತವೆ. ಕಯೋಟೆಗಳು, ಗಾಳಿಗೆ ಉರುಳುವ ಕುರುಚಲು ಪೊದೆಗಳು (ಟಂಬಲ್ ವೀಡ್), ಕಣ್ಣು ಹಾಯುವವರೆಗೂ ಕಾಣುವ ಮಣ್ಣಿಲ್ಲದ ಕಲ್ಲಿನ ಬೆಟ್ಟಗಳು, ನಡುವೆ ತೆರೆದುಕೊಳ್ಳುವ ವಿಶಾಲ ಬಂಜರು ಪ್ರದೇಶಗಳು– ಹೀಗೆ ಅತಿರೇಕದ ಸೌಂದರ್ಯವಿರುವ ಈ ಜಾಗ ಅತಿವಿರಳವಾದದ್ದು.

ಇಲ್ಲಿ ಸಿಗಬಹುದಾದ ಚಿನ್ನ, ಬೆಳ್ಳಿ ಮತ್ತಿತರ ಖನಿಜಗಳ ಪತ್ತೆಗಾಗಿ ಹಿಂದೆ ಸಾಕಷ್ಟು ಯತ್ನಗಳು ನಡೆದಿವೆ. ಇದರ ನೆನಪುಗಳ ಸಂಗ್ರಹವಿರುವ ಒಂದು ಪುಟ್ಟ ಮ್ಯೂಸಿಯಮ್ಮಿನಲ್ಲಿ ಅಂದಿನ ಉಪಕರಣಗಳು, ಇಲ್ಲಿ ಸಿಗುವ ವಿರಳ ಕಲ್ಲುಗಳಿಂದ ಮಾಡಿದ ಆಭರಣಗಳನ್ನು ಇಟ್ಟಿದ್ದಾರೆ. 1849 ರಲ್ಲಿ ಅಮೆರಿಕ ಮತ್ತು ಯೂರೋಪಿನ ಚಿನ್ನದ ಅನ್ವೇಷಕರ ತಂಡ ಇಲ್ಲಿ ಹಾದು ಹೋಗುವಾಗ ಉರಿಬಿಸಿಲಿಗೆ ಒಬ್ಬನನ್ನು ಕಳೆದುಕೊಂಡಿತು. 'ಡೆತ್ ವ್ಯಾಲಿ' ಎಂದು ಹೆಸರಿಟ್ಟದ್ದೇ ಅವರು. ಇಲ್ಲೀಗ ಗಣಿಗಾರಿಕೆ ಕಡಿಮೆಯಾಗಿದೆ. ಈಗಲೂ ಇಲ್ಲಿ ಸಿಗುತ್ತಿರುವ ಬೆಲೆಬಾಳುವ ಖನಿಜವೆಂದರೆ ಬೋರಾಕ್ಸ್ ಮಾತ್ರ.

ಹಿಂದಿನ ಕಾಲದಲ್ಲಿ ಇದನ್ನು ಕಣಿವೆಯಿಂದ ಹೊರ ಸಾಗಿಸಲು 20 ಹೇಸರಗತ್ತೆಗಳ ಗಾಡಿಯನ್ನು ಬಳಸುತ್ತಿದ್ದರು. ಈಗ ಸ್ವಲ್ಪ ಭಾಗಕ್ಕೆ ರೈಲು ಗಾಡಿಗಳಿವೆ. ಟಾರು ರಸ್ತೆಗಳಿವೆ. ಅಂದಿನ ಸಂಚಾರಿ ವಾಹನಗಳನ್ನು ಇಲ್ಲಿ ಪ್ರದರ್ಶನಕ್ಕಿಟ್ಟಿದ್ದಾರೆ.

ಲಾಸ್ ವೇಗಾಸಿನಿಂದ ಬಂದಲ್ಲಿ ಇಲ್ಲಿನ ಎರಡು ಓಯಸಿಸ್‌ಗಳ ಸುತ್ತ ಕಟ್ಟಿರುವ ದುಬಾರಿ ಹೋಟೆಲ್‌ಗಳನ್ನು ತಲುಪುವುದು ಕಷ್ಟವೇನಿಲ್ಲ. ಉರಿಬಿಸಿಲಿಗೆ ಅನ್ವರ್ಥಕ ನಾಮಗಳಿರುವ 'ಸ್ಟೋವ್ ಪೈಪ್ ರೆಸಾರ್ಟ್' ಮತ್ತು 'ಫರ್ನೇಸ್ ಇನ್ನು'ಗಳಿಂದ ಕ್ವಾಟ್ಜ ಮರಳಿನ ದಿಬ್ಬ, ಸ್ಕಾಟ್ಟೀಸ್ ಕ್ಯಾಸ್ಲ್, ಮೊಸೈಕ್ ಕಣಿವೆ ಮತ್ತು 'ಡಾಂಟೆಯ ನೋಟ'ದ ದಿಬ್ಬಗಳನ್ನು ನೋಡಬಹುದು. ಇಲ್ಲಿ ಖರ್ಜೂರದ ಮರಗಳನ್ನು ಕೂಡ ಬೆಳೆದಿದ್ದಾರೆ.

ರಾತ್ರಿಯ ವೇಳೆ, ಬೆಳಕಿನ ಯಾವುದೇ ಮಾಲಿನ್ಯವಿಲ್ಲದ ಆಗಸದಲ್ಲಿ ನಕ್ಷತ್ರ ಅಭ್ಯಾಸಕ್ಕೆ ಈ ಜಾಗ ಪ್ರಸಿದ್ಧ. ಚಾರಣಿಗರು, ಬೈಕು ಸವಾರರು, ಸಂದರ್ಶಕರು, ಪ್ರವಾಸಿಗರು, ಸಿನಿಮಾದವರು ಎಲ್ಲರಿಗೂ ಈ ಎರಡು ಹೋಟೆಲ್‌ಗಳೇ ಸರಿ. ಬಿಸಿಲಿನ ಬೇಗೆಗೆ ತಣ್ಣೀರಿನ ಈಜು ಕೊಳಕ್ಕಿಳಿದು ಮೀಯೋಣವೆಂದರೆ, ಬಿಸಿಗಾಳಿಯ ಶಾಖದಿಂದಾಗಿ ಇವು ಸಹಜವಾಗಿಯೇ ಬಿಸಿ ನೀರಿನ ಕೊಳಗಳು! ಹವಾಮಾನದ ವೈಪರೀತ್ಯಗಳಿಂದಾಗಿ ಇಲ್ಲಿಗೆ ಅಕ್ಟೋಬರ್‌ನಿಂದ ಮೇ ವರೆಗೆ ಬರುವುದು ಸೂಕ್ತ.